ನಾಗಮಂಗಲ ಹಾಗೂ ತಾಲೂಕಿನಲ್ಲಿ ಈ ಕೆಳಕಂಡ 9 ಪದವಿ ಪೂರ್ವ ಕಲೇಜುಗಳು ನಡೆಯುತ್ತಿದ್ದು ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ.

		ಪಿ.ಯು.ಸಿ	
		ಪ್ರಥಮ	ದ್ವಿತೀಯ
1.	ಸ.ಪ.ಪೂ.ಕಾ.ನಾಗಮಂಗಲ	408	404
2.	ಸ.ಪ.ಪೂ.ಕಾ.ಕದಬಹಳ್ಳಿ	90	87
3.	ಸ.ಪ.ಪೂ.ಕಾ.ದೇವಲಾಪುರ	38	52
4.	ಸ.ಪ.ಪೂ.ಕಾ.ಬೆಳ್ಳೂರು	151	189
5.	ಸ.ಪ.ಪೂ.ಕಾ.ಚೀಣ್ಯ	49	53
6.	ಸ.ಪ.ಪೂ.ಕಾ.ಬಿಂಡಿಗನವಿಲ್	79	51
7.	ಮಾದರಿ ಬಾಲಿಕಾ ಪ.ಪೂ.ಕಾ ನಾಗಮಂಗಲ	80	91
8.	ಶ್ರೀ ಗಂಗಾಧರೇಶ್ವರಸ್ವಾಮಿ ಪ.ಪೂ.ಕಾ.ಆದಿಚುಂಚುನಗಿರಿ	206	187
9.	ಶ್ರೀ ಭಕ್ತನಾಥ ಪಪೂಕಾ ಬೆಳ್ಳೂರು	144	84

ಮೇಲಿನ ಮಾಹಿತಿಯನ್ವಯ ಕ್ರಮ ಸಂಖ್ಯೆ: 1,4,8 ಮತ್ತು 9ರ ಪದವಿ ಪೂರ್ವ ಕಾಲೇಜುಗಳನ್ನು ಹೊರತುಪಡಿಸಿ ಉಳಿದ 5 ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳ ಸಂಖ್ಯೆಯಿರುವುದಿಲ್ಲ. ಈ 5 ಪದವಿ ಪೂರ್ವ ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿರುತ್ತದೆ. ಆದ್ದರಿಂದ ಬೋಗಾದಿಯಲ್ಲಿ ಮತ್ತು ಅದೇ ರೀತಿ ಮೈಲಾರಪಟ್ಟಣದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯುವ ಅವಶ್ಯಕತೆ ಸಧ್ಯಕ್ಕೆ ಕಂಡು ಬರುವುದಿಲ್ಲ.

ಭಾಲ್ಕಿ ಕ್ಷೇತ್ರದಲ್ಲಿ ಸಂಘ ಸಂಸ್ಥೆಗಳಿಗೆ ಆರ್ಥಿಕ ನೆರವು

186(1573) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಾಲ್ಕಿ ಕ್ಷೇತ್ರಕ್ಕೆ 1999-2000 ದಿಂದ ಇಲ್ಲಿಯವರೆಗೆ ಯಾವ ಯೋಜನೆಯಡಿಯಲ್ಲಿ ಎಷ್ಟು ಆರ್ಥಿಕ ನೆರವನ್ನು ನೀಡಲಾಗಿದೆ (ವಿವರಗಳನ್ನು ಒದಗಿಸುವುದು)

ಆ. 2003-04ರಲ್ಲಿ ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ. ಒಟ್ಟು ರೂ. 95,000 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ವಿಧಾನಸಭಾ ಕ್ಷೇತ್ರಾವಾರು ಅನುದಾನ ಬಿಡುಗಡೆ ಮಾಡುವ ಪದ್ಧತಿ ಇಲಾಖೆಯಲ್ಲಿ ಜಾರಿಯಲ್ಲಿರುವುದಿಲ್ಲ. ಬದಲಿಗೆ 02-03ನೇ ಸಾಲಿನಿಂದ ಪ್ರತಿ ತಾಲ್ಲೂಕಿಗೆ ರೂ. 25,000-00 ಗಳಂತೆ ಅನುದಾನ ಬಿಡುಗಡೆ ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

ಅನುಬಂಧ

ಬಾಲ್ಕಿ ಕ್ಷೇತ್ರಕ್ಕೆ 1999–2000 ದಿಂದ ಇಲ್ಲಿಯವರೆಗೆ ನೀಡಲಾದ ಸಾಂಸ್ಕೃತಿಕ ಕಾರ್ಯಕ್ರಮ ವಿವರ

ಕ್ರಮ ಸಂಖ್ಯೆ	ಕಲಾವಿದರ ಹೆಸರು ಹಾಗೂ ವಿಳಾಸ	ಮೊತ್ತ (ರೂ.ಗಳಲ್ಲಿ)
1.	ಶ್ರೀ ದತ್ತಾತ್ರಿ ಹಾಗೂ ಸಂಗಡಿಗರು ಮು:ಹಲಬುರ್ಗಾ, ಭಾಲ್ಕಿ ತಾ:	1,500.00
2.	ಶ್ರೀ ಶಿವಾನಂದ ಔಟಿ ಹಿರೇಮಠ ಸಂಸ್ಥಾನ, ಭಾಲ್ಕಿ	1,500.00
3.	ಪಬ್ಲಿಕ್ ಎಜ್ಯುಕ್ಷೇಷನ್ ಸೊಸೈಟಿ, ಭಾಲ್ಕಿ	10,000.00
4.	ಶ್ರೀ ಈಶ್ವರಪ್ಪ ಪಂಜಾಳ, ಮು:ಕೋನ ಮೆಳಕುಂದಾ ತಾ: ಭಾಲ್ಕಿ, ಜಿಲ್ಲೆ:ಬೀದರ್	1,500.00
5.	ಶ್ರೀ ಭಾಲ್ಕಿ ಶಾಲಾ ಮಕ್ಕಳು	3,000.00
6.	ಶ್ರೀ ಶಿವಾನಂದ ಔಟಿ ಮು: ಹೀರೇಮಠ ಸಂಸ್ಥಾನ, ಭಾಲ್ಕಿ	3,000.00
7.	ಶ್ರೀ ಶೇಖ ಹನ್ನುಮಿಯ್ಯಾ ಮು: ಭಾಲ್ಕಿ ಮತ್ತು ಶ್ರೀ ನದಲಿಂಗ ಪಾಟೀಲ್ ಹಿರೇಮಠ ಸಂಸ್ಥಾನ, ಭಾಲ್ಕಿ	12,500.00
8.	ಶ್ರೀ ಶಂಕರ ಪಾಟೀಲ್ ಹಾಗೂ ಸಂಗಡಿಗರು, ಭಾಲ್ಕಿ ಹಿರೇಮಠ ಸಂಸ್ಥಾನ	5,000.00
9.	ಶ್ರೀ ಈಶ್ವರಪ್ಪ ಪಾಂಜಾಳ, ಮು: ಕೋನ ಮಳಿಕುಂದಾ, ತಾ: ಭಾಲ್ಕಿ	4,000.00
10.	ಶ್ರೀ ನಾಗಲಿಂಗ ಕವಿ ಭಾಲ್ಕಿ ತಾ:	1,500.00
11.	ಶ್ರೀ ರಾಜಕುಮಾರ ಹೂಗಾರ, ತಾ: ಭಾಲ್ಕಿ	1,500.00
12.	ಶ್ರೀ ಮಾನಿಕಪ್ಪ ಮು: ಕೋನಮೆಳನಾ ಕುಂದಾ ತಾ: ಭಾಲ್ಕಿ	1,500.00
13.	ಶ್ರೀ ಸೂರ್ಯಕಾಂತ ಹಾಗೂ ಸಂಗಡಿಗರು, ಭಾಲ್ಕಿ ತಾ:	1,500.00
14.	ಶ್ರೀಮತಿ ಕಮಲಾಬಾಯಿ ಶಮನವಾಡಿ, ತಾ: ಭಾಲ್ಕಿ	1,500.00
15.	ಶ್ರೀ ಸಂಗಪ್ಪ ಕರಡಿಯಾಳ್ ಮು: ಕರಡಿಯಾಳ್, ತಾ: ಭಾಲ್ಕಿ	500.00
16.	ಶ್ರೀಮತಿ ಭಾಗ್ಯಶ್ರೀ ಭಾಲ್ಕಿ ಹಿರೇಮಠ ಸಂಸ್ಥಾನ	5,000.00

ಕ್ರಮ ಸಂಖ್ಯೆ	ಕಲಾವಿದರ ಹೆಸರು ಹಾಗೂ ವಿಳಾಸ	ಮೊತ್ತ (ರೂ.ಗಳಲ್ಲಿ)
17.	ಶ್ರೀ ಭವಾನಿ ದೇವಾಲಯ ಸಮಿತಿ, ದೇವಿನಗರ, ಭಾಲ್ಕಿ ಇವರಿಗೆ ನವರಾತ್ರಿ ಮಹೋತ್ಸವಕ್ಕೆ	20,000.00
18.	ಪ್ರತಿ ತಾಲ್ಲೂಕಿನ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡಲು ಜಿಲ್ಲಾ ಸಹಾಯಕ ನಿರ್ದೇಶಕರಿಗೆ ಬಿಡುಗಡೆ ಮಾಡಿದ ಮೊತ್ತ	25,000.00
	ಒಟ್ಟು	95,000.00

ಶಿಕಾರಿಪುರ ತಾಲ್ಲೂಕಿನ ಗ್ರಂಥಾಲಯಗಳ ಕಾರ್ಯ ನಿರ್ವಹಣೆ

187(2004) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿಕಾರಿಪುರ ತಾಲ್ಲೂಕಿಗೆ ಮಂಜೂರಾದ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಆ. ಗ್ರಂಥಾಲಯಗಳು ಸರಿಯಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ;

ಇ. ಗಮನಕ್ಕೆ ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಶಿಕಾರಿಪುರ ತಾಲ್ಲೂಕಿಗೆ 2 ಶಾಖೆಗಳು ಮತ್ತು 19 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು, ಒಟ್ಟು 21 ಗ್ರಂಥಾಲಯಗಳು ಮಂಜೂರಾಗಿರುತ್ತವೆ.

ಆ. ಬಳಕಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹೊರತುಪಡಿಸಿ ಬೇರೆ ಗ್ರಂಥಾಲಯಗಳ ಕಾರ್ಯನಿರ್ವಹಣೆ ಬಗ್ಗೆ ದೂರು ಇರುವುದಿಲ್ಲ.

ಇ. ಸಂಬಂಧಪಟ್ಟ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಿಂದ ವರದಿ ಪಡೆದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ವಸತಿ ಯೋಜನೆಗಳಲ್ಲಿ ಕಟ್ಟಿಸಿದ ಮನೆಗಳು

188(1515) ಶ್ರೀ ಪಾಟೀಲ್ ಡಿ.ಆರ್ (ಗದಗ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಕಟ್ಟಿಸಿದ ಮನೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)